**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 30 ಡಿಪಿಐ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-1, ದಿನಾಂಕ:23/08/2017.

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.

ಇವರಿಗೆ,
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.

ಸ್ವೀಕೃತ ಶಾಖೆ 23-8-17

ಮಾನ್ಯರೆ,

ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹೊಸದಾಗಿ ಮೇಲ್ದರ್ಜೆಗೇರಿಸಿದ ದೈಹಿಕ ಶಿಕ್ಷಣ ಅಧಿಕಾರಿಗಳ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರಿಸುವ ಬಗ್ಗೆ.

ಉಲ್ಲೇಖ:- ತಮ್ಮ ಪತ್ರ ಸಂಖ್ಯೆ:ಸಿ1(6)ದೈ.ಶಿ.ಅಧಿವೃಂನೇನಿ.ತಿದ್ದುಪಡಿ/05/2016-17. ದಿನಾಂಕ:27/06/2016.

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹೊಸದಾಗಿ ಮೇಲ್ದರ್ಜೆಗೇರಿಸಿದ ದೈಹಿಕ ಶಿಕ್ಷಣ ಅಧಿಕಾರಿಗಳ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರಿಸುವ ಕುರಿತಂತೆ ಪರಿಶೀಲಿಸಲು ಕೆಳಕಂಡ ಮಾಹಿತಿ/ಸ್ಪಷ್ಟೀಕರಣಗಳಿಗೆ ಸೂಕ್ತ ಉತ್ತರವನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

(1) ಈ ಹಿಂದೆ ಅಸ್ತಿತ್ವದಲ್ಲಿದ್ದ, ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು (ಪ್ರಾಥಮಿಕ ಶಿಕ್ಷಣ) (ವೇತನ ಶ್ರೇಣಿ ರೂ.11400-21600) ವೃಂದದ ಹುದ್ದೆಗಳನ್ನು ಜಿಲ್ಲಾ ದೈಹಿಕ ಶಿಕಷಣ ಅಧಿಕಾರಿಗಳು (ಕ್ರೀಡೆ ಮತ್ತು ದೈಹಿಕ ಶಿಕ್ಷಣ) (ವೇತನ ಶ್ರೇಣಿ ರೂ.14050-25050) ವೃಂದಕ್ಕೆ ಉನ್ನತೀಕರಿಸಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ:ಡಿಪಿಎಆರ್ 55 ಎಸ್‌ಸಿಆರ್ 1978, ದಿನಾಂಕ:08/03/1979 ರಲ್ಲಿನ ಮಾರ್ಗಸೂಚಿಗಳನ್ವಯ ಯಾವುದೇ ವೃಂದದಲ್ಲಿನ ಮಂಜೂರಾದ ಎಲ್ಲಾ ಹುದ್ದೆಗಳನ್ನು ಉನ್ನತೀಕರಿಸಿದ ಸಂದರ್ಭದಲ್ಲಿ ಊ ಹಿಂದಿನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರು ಸ್ವಯಂಚಾಲಿತವಾಗಿ ಉನ್ನತೀಕರಿಸಿದ ಹುದ್ದೆಯಲ್ಲಿ ಸ್ಥಾನಪನ್ನರಾಗುತ್ತಾರೆ ಮತ್ತು ಅವರಿಗೆ ಉನ್ನತೀಕರಿಸಿದ ಹುದ್ದೆಯ ವೇತನ ಶ್ರೇಣಿಯನ್ನು ನೀಡಬೇಕಾಗಿರುತ್ತದೆ. ಆದರೆ ದಿನಾಂಕ:13/11/2011ರಲ್ಲಿ ಈ ಹಿಂದೆ ಅಸ್ತಿತ್ವದಲ್ಲಿದ್ದ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕ ವೃಂದದಿಂದಲೇ ಉನ್ನತೀಕರಿಸಲಾದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಹುದ್ದೆಗೆ ಮುಂಬಡ್ತಿ ನೀಡಿರಲು ಕಾರಣವೇನು?

(2) ಈ ಹಿಂದೆ ಉನ್ನತೀಕರಿಸಲಾದ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರ ವೃಂದದ ಮಂಜೂರಾದ ಎಲ್ಲಾ 33 ಹುದ್ದೆಗಳಲ್ಲಿ ನೌಕರರು ಸ್ಥಾನಪನ್ನರಾಗಿರಲಿಲ್ಲವೇ? ಮತ್ತು ಹುದ್ದೆಗಳು ಖಾಲಿ ಇದ್ದವೇ? ಹಾಗಿದ್ದಲ್ಲಿ, ಎಷ್ಟು ಹುದ್ದೆಗಳು ಖಾಲಿ ಇದ್ದವು?

(3) ಈ ಹಿಂದೆ ಅಸ್ತಿತ್ವದಲ್ಲಿದ್ದ, ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರ ವೃಂದದಲ್ಲಿ 12 ನೌಕರರು ಸ್ಥಾನಪನ್ನರಾಗಿದ್ದರೆಂಬ ಕಾರಣಕ್ಕೆ ಅವರನ್ನು ಮಾತ್ರ ಉನ್ನತೀಕರಿಸಲಾದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಹುದ್ದೆಯ ಮುಂಬಡ್ತಿಗೆ ಪರಿಗಣಿಸಲಾಗಿದೆಯೇ?

ತಮ್ಮ ನಂಬುಗೆಯ,

(ಟಿ.ಡಿ. ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ.

Scanned by CamScanner

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ನೃಪತುಂಗ ರಸ್ತೆ ಬೆಂಗಳೂರು –01

ಸಂಖ್ಯೆ:ಸಿ1(6) ದೈ.ಶಿ.ಅಧಿವೃಂನೇ.ತಿದ್ದುಪಡಿ–05: 2016–17 ದಿನಾಂಕ:12–09–2017

ರವಾನಿಸಿದೆ ........................ ದಿನಾಂಕ..................

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು–1.

ಮಾನ್ಯರೇ,

ವಿಷಯ:–ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹೊಸದಾಗಿ ಮೇಲ್ದರ್ಜೆಗೇರಿಸಿದ ದೈಹಿಕ ಶಿಕ್ಷಣ ಅಧಿಕಾರಿಗಳ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರಿಸುವ ಬಗ್ಗೆ

ಉಲ್ಲೇಖ:– 1] ಸರ್ಕಾರದ ಪತ್ರ ಸಂಖ್ಯೆ:ಇಡಿ 30 ಡಿಪಿಐ 2013 ದಿನಾಂಕ: 18/08/2017.
2] ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 27/06/2016.
3] ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 73 ಡಿಪಿಐ 2010 ದಿನಾಂಕ: 13/01/2011.
4] ಸರ್ಕಾರದ ಆದೇಶ ಸಂಖ್ಯೆ ಇಡಿ 98 ಯೋಯೋಕ 2007 ದಿನಾಂಕ: 30/08/2008
5] ಸರ್ಕಾರದ ಆದೇಶ ಸಂಖ್ಯೆ ಇಡಿ 138 ಯೋಯೋಕ:2008 ದಿನಾಂಕ: 10/07/2008.
6] ಸರ್ಕಾರದ ಸುತ್ತೋಲೆ ಸಂಖ್ಯೆ:ಡಿಪಿಎಆರ್ 55 ಎಸ್‌ಸಿಆರ್ 1978 ದಿನಾಂಕ: 08/03/1979.

~ ~ ~

ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ಹೊಸದಾಗಿ ಉನ್ನತೀಕರಿಸಿದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ (ಸಿ&ಆರ್) ನಿಯಮದಲ್ಲಿ ಸೇರಿಸುವ ಸಂಬಂಧ ಕೆಲವು ಮಾಹಿತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಲಾಗಿದೆ. ಮಾಹಿತಿಯನ್ನು ಈ ಕೆಳಕಂಡಂತೆ ಒದಗಿಸಿದೆ.

1] ಪ್ರೊ ವೈದ್ಯನಾಥನ್ ವರದಿಯಂತೆ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು ಗ್ರೂಪ್–ಬಿ ವೇತನ ಶ್ರೇಣಿ (11400–21600) ಈ ಹುದ್ದೆಯನ್ನು ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು ಗ್ರೂಪ್–ಎ ಕಿರಿಯ ಶ್ರೇಣಿ (14050–25050) ಎಂದು ಉನ್ನತೀಕರಿಸಲಾಗಿದೆ. ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರ ಹುದ್ದೆಯು ಉನ್ನತೀಕರಿಸುವುದಕ್ಕೆ ಮೊದಲು ಗ್ರೂಪ್–ಬಿ ವೃಂದದ ಹುದ್ದೆಯಾಗಿದ್ದು ಈ ಹುದ್ದೆಗೆ ಪ್ರೌಢ ಶಾಲೆಗಳಲ್ಲಿನ ದೈಹಿಕ ಶಿಕ್ಷಕರು ಗ್ರೇಡ್–1 ವೃಂದದಲ್ಲಿ ಜೇಷ್ಠತೆ ಆಧಾರದ ಮೇಲೆ ಅರ್ಹರಿಗೆ ಬಡ್ತಿ ನೀಡಲಾಗುತ್ತಿದ್ದರಿಂದ ಸ್ವಯಂಚಾಲಿತವಾಗಿ ಉನ್ನತೀಕರಿಸಿದ ಹುದ್ದೆಯಲ್ಲಿ ಸ್ಥಾನಪನ್ನಗೊಳಿಸಿರುವುದಿಲ್ಲ. ಬದಲಾಗಿ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರ ಹುದ್ದೆಯಲ್ಲಿ ರಾಜ್ಯ ಮಟ್ಟದ ಜೇಷ್ಠತೆ ಮತ್ತು ಅರ್ಹತೆಯ ಆಧಾರದ ಮೇಲೆ ಬಡ್ತಿಯನ್ನು ದಿನಾಂಕ 13–11–2011ರಲ್ಲಿ ನೀಡಲಾಗಿದೆ. ದಿನಾಂಕ 13–11–2011ರಂದು ಉನ್ನತೀಕರಿಸಿದ 32+3 ಹುದ್ದೆಗಳು ಖಾಲಿ ಇದ್ದರೂ ಸಹ 12 ಜನ ಮಾತ್ರ ಬಡ್ತಿಗೆ ಅರ್ಹರಿದ್ದ ಕಾರಣ ಅವರಿಗೆ ಮಾತ್ರ ಬಡ್ತಿ ನೀಡಿ ಇವರಿಗೆ ಉನ್ನತೀಕರಿಸಿದ ಹುದ್ದೆಯಲ್ಲಿ ವೇತನ ಶ್ರೇಣಿ ನಿಗಧಿಗೊಳಿಸಲು ಮತ್ತು ಸಿ&ಆರ್‌ನಲ್ಲಿ ಸೂಕ್ತ ತಿದ್ದುಪಡಿ ಮಾಡಲು ಸರ್ಕಾರವನ್ನು ಕೋರಲಾಗಿದೆ.

2] ಉನ್ನತೀಕರಿಸಿದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಹುದ್ದೆಗಳು ದಿನಾಂಕ:13/11/2011ರಲ್ಲಿ 32+3 ಹುದ್ದೆಗಳು ಖಾಲಿ ಇದ್ದವು ಈ ಹುದ್ದೆಗೆ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷರ ಹುದ್ದೆಗಳು ಫೀಡರ್ ಕೇಡರ್ ಹುದ್ದೆಗಳಾಗಿದ್ದು ಆ ಹುದ್ದೆಗಳಿಂದಲೇ ಬಡ್ತಿ ನೀಡಬೇಕಾಗಿರುವುದರಿಂದ ನಿಯಮಾವಳಿಯಂತೆ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕ ವೃಂದ ವೇತನ ಶ್ರೇಣಿ (11400–21600)ರಲ್ಲಿ ಸ್ಥಾನಪನ್ನ ಹೊಂದಿ ಅರ್ಹರಿದ್ದ 12 ಮಂದಿಗೆ ಮಾತ್ರ ಮುಂಬಡ್ತಿ ನೀಡಲಾಗಿದೆ.

3] ಹೌದು, ಈ ಹಿಂದೆ ಅಸ್ತಿತ್ವದಲ್ಲಿದ್ದ, ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರ ವೃಂದದಲ್ಲಿ ಸ್ಥಾನಪನ್ನ ಹೊಂದಿದ 12 ನೌಕರರಿಗೆ ಮಾತ್ರ ಉನ್ನತೀಕರಿಸಲಾದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಹುದ್ದೆಯ ಮುಂಬಡ್ತಿಗೆ ಪರಿಗಣಿಸಲಾಗಿದೆ.

Scanned by CamScanner

ಉಲ್ಲೇಖ(2)ರ ಈ ಕಛೇರಿ ಪತ್ರದಲ್ಲಿ ಉನ್ನತೀಕರಿಸಿದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಹುದ್ದೆಗೆ ಬಡ್ತಿ ನೀಡಿರುವ 12 ಅಧಿಕಾರಿಗಳಿಗೆ ವೇತನ ಶ್ರೇಣಿ (14050–25050)ಯನ್ನು ನಿಗಧಿಗೊಳಿಸುವ ಬಗ್ಗೆ ಮತ್ತು ಸಿ & ಆರ್ ತಿದ್ದುಪಡಿ ಆದೇಶ ಹೊರಡಿಸುವಂತೆ ಸರ್ಕಾರವನ್ನು ಈಗಾಗಲೇ ಕೋರಲಾಗಿದೆ. ಮುಂದುವರೆದು ಈ 12 ಅಧಿಕಾರಿಗಳಿಗೆ ವೇತನ ಶ್ರೇಣಿ (14050–25050)ಗಳನ್ನು ಕೆ.ಸಿ.ಎಸ್.ಆರ್ ನಿಯಮ–42(ಬಿ)(1) ಮತ್ತು (2) ರಂತೆ ನಿಗಧಿಗೊಳಿಸುವಂತೆ ಮಹಾಲೇಖಪಾಲರಿಗೆ ಸರ್ಕಾರದ ಪತ್ರ ಸಂಖ್ಯೆ ಇಡಿ 83 ಡಿಪಿಐ 2012 ದಿನಾಂಕ 09–04–2012 ರಲ್ಲಿಯೂ ಕೋರಲಾಗಿದೆ ಎಂಬ ಅಂಶವನ್ನು ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ,

(ಎಸ್.ಕಾತ್ಯಾಯಿನಿದೇವಿ)
ಜಂಟಿ ನಿರ್ದೇಶಕರು(ಆಡಳಿತ)

21/9/12

Scanned by CamScanner